# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 420 |
| 2. | ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು) |
| 3. | ಉತ್ತರಿಸಬೇಕಾದ ದಿನಾಂಕ | : | 16-02-2023 |
| 4. | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಿ.ಎಂ.ಆರ್.ಸಿ.ಎಲ್ ನಿಂದ ನಡೆಯುತ್ತಿರುವ ಮೆಟ್ರೋ ಕಾಮಗಾರಿಯ ಸಂದರ್ಭದಲ್ಲಿ ಕಬ್ಬಿಣದ ಕಂಬಿಗಳ ಗುಚ್ಛ ಉರುಳಿ ಬಿದ್ದು, ತಾಯಿ ಹಾಗೂ ಮಗು ಸಾವನ್ನಪ್ಪಿರುವ ಘಟನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ಘಟನೆಗೆ ಕಾರಣರಾದವರ ಬಗ್ಗೆ ಕೈಗೊಂಡಿರುವ ಕ್ರಮಗಳೇನು; ಸಂತ್ರಸ್ತರಿಗೆ ನೀಡಿರುವ ಪರಿಹಾರವೇನು; | ಘಟನೆಗೆ ಸಂಬಂಧಪಟ್ಟಂತೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1.ಬಿ.ಎಂ.ಆರ್.ಸಿ.ಎಲ್ ನ ಮೂರು ಅಭಿಯಂತರರುಗಳನ್ನು ಅಮಾನತ್ತು ಗೊಳಿಸಲಾಗಿದೆ.<br>2.ಘಟನೆಯಲ್ಲಿ ಸಾವನ್ನಪ್ಪಿದ ಸಂತ್ರಸ್ತಳ ಪತಿಯು ನೀಡಿದ ದೂರಿನ ಮೇರೆಗೆ ಗೋವಿಂದಪುರ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ.<br>3.IISC ಬೆಂಗಳೂರಿನ ತಜ್ಞರಿಂದ ಪ್ರಕರಣವನ್ನು ಪರಿಶೀಲಿಸಿ ವಿವರವಾದ ವರದಿಯನ್ನು ಪಡೆಯಲಾಗಿದೆ. ವರದಿಯ ಆಧಾರದ ಮೇಲೆ ಮುಂದಿನ ಕ್ರಮವನ್ನು ಕೈಗೊಳ್ಳಲಾಗುತ್ತದೆ.<br>4.ಸಂತ್ರಸ್ತ ಕುಟುಂಬದವರಿಗೆ ಬಿ.ಎಂ.ಆರ್.ಸಿ.ಎಲ್ ವತಿಯಿಂದ ರೂ.20.00 ಲಕ್ಷದ ಪರಿಹಾರವನ್ನು ಘೋಷಿಸಲಾಗಿದೆ. |
| ಇ) | ಕಬ್ಬಿಣದ ಕಂಬಿಗಳ ಗುಚ್ಛದ ಎತ್ತರ ಎಷ್ಟು ಅಡಿಗಳಿಂದ ಕೂಡಿತ್ತು; ಈ ಕಾಮಗಾರಿಯನ್ನು ಕೈಗೊಂಡಿರುವ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? | ಕಬ್ಬಿಣದ ಕಂಬಿಗಳ ಗುಚ್ಛದ ಎತ್ತರ ಸುಮಾರು 18 ಮೀಟರ್ ಇತ್ತು, ಗುತ್ತಿಗೆದಾರರ ವಿರುದ್ಧ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1. ಗುತ್ತಿಗೆದಾರರ ಮೇಲೆ ರೂ.15.00 ಲಕ್ಷದ ದಂಡವನ್ನು ವಿಧಿಸಲಾಗಿದೆ.<br>2. ಮೆಟ್ರೋ ನಿಗಮದ ಆದೇಶದನ್ವಯ ಗುತ್ತಿಗೆದಾರರು ಮೂರು ಜನ ಸಿಬ್ಬಂದಿಯನ್ನು ವಜಾ ಗೊಳಿಸಿರುತ್ತಾರೆ.<br>3. ಗುತ್ತಿಗೆದಾರರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿದೆ. |

ಕಡತ ಸಂಖ್ಯೆ: ನಅಇ 30 ಪಿ.ಆರ್.ಜೆ 2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ